# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570 006

ಕರಾಮುವಿ/ದಾ.ವಿ/ಪ.ವಿ.ಕ.ಸಂ.08/2020-21 ದಿನಾಂಕ:01.01.2026


## "ಬಾಕ್ಸ್ ಟೆಂಡರ್ ಪ್ರಕಟಣೆ"

**ವಿಷಯ:-** 2025-26 ಹಾಗೂ 2026-27ನೇ ಸಾಲಿನ ಪರೀಕ್ಷಾ ದಾಖಲಾತಿಗಳನ್ನು ಬೈಂಡಿಂಗ್ ಮಾಡಿಸುವ ಕಾರ್ಯಕ್ಕೆ ಬಾಕ್ಸ್ ಟೆಂಡರ್ ಮೂಲಕ ದರಪಟ್ಟಿ ಆಹ್ವಾನಿಸುವ ಬಗೆಗೆ.

**ಉಲ್ಲೇಖ:** ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 09.12.2025

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ 2025-26 ಹಾಗೂ 2026-27ನೇ ಶೈಕ್ಷಣಿಕ ಸಾಲಿನ ದಾಖಲಾತಿಗಳನ್ನು ಅಂದರೆ ಪ್ರಸ್ತುತ ಸಾಲಿನಲ್ಲಿ ಬಂದಿರುವ ಮತ್ತು ಮುಂದೆ ಬರುವ UG/PG ಹಾಗೂ Diploma Course ಹಾಗೂ Certificate Course ಗಳ ಪರೀಕ್ಷಾ ಫಲಿತಾಂಶದ ದಾಖಲೆಗಳು, IA Marksನ ದಾಖಲೆಗಳು OMR ದಾಖಲೆಗಳು, ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಅನುಮೋದನಾ ಪಟ್ಟಿಗಳು, A Formಗಳ ದಾಖಲೆಗಳನ್ನು ಹಾಗೂ ಇನ್ನಿತರ ಗೌಪ್ಯತಾ ದಾಖಲೆಗಳನ್ನು ಬೈಂಡಿಂಗ್ ಮಾಡಿಸಿ ಪುಸ್ತಕ ರೂಪದಲ್ಲಿ ಶೇಖರಿಸಬೇಕಾಗಿರುತ್ತದೆ. ಎಲ್ಲಾ ತೆರಿಗೆಗಳು ಸೇರಿದಂತೆ ಅಂದಾಜು ಮೊತ್ತ ರೂ. 5,00,000/- **(ರೂಪಾಯಿ ಐದು ಲಕ್ಷ ಮಾತ್ರ)** ಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ Specifications ಪ್ರಕಾರ ನಿಯಮ ಮತ್ತು ಷರತ್ತುಗಳ ಅನುಗುಣವಾಗಿ ತಗಲುವ ಕನಿಷ್ಠ ದರಗಳನ್ನು ತಿಳಿಸಲು ತಮ್ಮಿಂದ ದರಪಟ್ಟಿಗಳನ್ನು ಸಲ್ಲಿಸಲು ಆಹ್ವಾನಿಸಲಾಗಿದೆ.

## Specifications

1. 2 ಪೌಂಡ್ ಸ್ಟಿಪ್ ಬೋರ್ಡ್ (Stip Board) ಸುಪಿರಿಯರ್ ಕ್ಯಾಲಿಕೊ A4 ಅಳತೆಯ 190 ಹಾಳೆಗಳ ಒಂದು ಪುಸ್ತಕವನ್ನು 2 Mg ದಾರದಿಂದ (Thread) ಹೊಲೆದು ಕಾಟ್ಟನ್ ಬಟ್ಟೆಯಿಂದ (spine cloth cotten) ಅಂಟಿಸಿ ಬೈಂಡಿಂಗ್ ಮಾಡಲು ತಗಲುವ ದರ ರೂ.__________
2. 2 ಪೌಂಡ್ ಸ್ಟಿಪ್ ಬೋರ್ಡ್ (Stip Board) ಸುಪೀರಿಯರ್ ಕ್ಯಾಲಿಕೊ ಲೀಗಲ್ (legal) ಅಳತೆಯ 190 ಹಾಳೆಗಳ ಒಂದು ಪುಸ್ತಕವನ್ನು 2Mg ದಾರದಿಂದ (Thread) ಹೊಲೆದು ಕಾಟ್ಟನ್ ಬಟ್ಟೆಯಿಂದ (spine cloth cotten) ಅಂಟಿಸಿ ಬೈಂಡಿಂಗ್ ಮಾಡಲು ತಗಲುವ ದರ ರೂ.__________
3. 3 ಪೌಂಡ್ ಸ್ಟಿಪ್ ಬೋರ್ಡ್(Stip Board) ಸುಪಿರಿಯರ್ ಕ್ಯಾಲಿಕೊ ಲೀಗಲ್ ಅಳತೆಯ 190 ಹಾಳೆಗಳ ಒಂದು ಪುಸ್ತಕವನ್ನು 2Mg ದಾರದಿಂದ (Thread ) ಹೊಲೆದು ಕಾಟ್ಟನ್ ಬಟ್ಟೆಯಿಂದ (spine cloth cotten ) ಅಂಟಿಸಿ ಬೈಂಡಿಂಗ್ ಮಾಡಲು ತಗಲುವ ದರ ರೂ.__________
4. A4 ಅಳತೆಯ ಸಾಮಾನ್ಯ ರ್‍ಯಾಪರ್ ಅಳತೆಯ 190 ಹಾಳೆಗಳ ಒಂದು ಪುಸ್ತಕವನ್ನು ಬೈಂಡಿಂಗ್ ಮಾಡಲು ತಗಲುವ ದರ ರೂ.__________
5. ಲೀಗಲ್ (legal) ಅಳತೆಯ ಸಾಮಾನ್ಯ ರ್‍ಯಾಪರ್ ಅಳತೆಯ 190 ಹಾಳೆಗಳ ಒಂದು ಪುಸ್ತಕವನ್ನು ಬೈಂಡಿಂಗ್ ಮಾಡಲು ತಗಲುವ ದರ ರೂ.__________
6. A3 ಅಳತೆಯ ಸಾಮಾನ್ಯ ರ್‍ಯಾಪರ್ ಅಳತೆಯ 190 ಹಾಳೆಗಳ ಒಂದು ಪುಸ್ತಕವನ್ನು ಬೈಂಡಿಂಗ್ ಮಾಡಲು ತಗಲುವ ದರ ರೂ.__________

**ದರಪಟ್ಟಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿದ್ದು, ತಪ್ಪಿದ್ದಲ್ಲಿ, ನಿಖರವಲ್ಲದ ದರಪಟ್ಟಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.**

1. ಇ.ಎಂ.ಡಿ. ಮೊತ್ತ ರೂ. 12,500/- ಗಳ ಡಿ.ಡಿ.ಯನ್ನು **"ಹಣಕಾಸು ಅಧಿಕಾರಿಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು – 570 006"** ಇವರ ಹೆಸರಿನಲ್ಲಿ ಸಲ್ಲಿಸುವುದು.
2. ಜಿ.ಎಸ್.ಟಿ. ನೋಂದಣಿದಾರರು ಮಾತ್ರ ದರಪಟ್ಟಿಯನ್ನು ಸಲ್ಲಿಸಲು ಅರ್ಹರಾಗಿದ್ದು, ದರಪಟ್ಟಿಯೊಂದಿಗೆ GST ನೆರಳಚ್ಚು ಪ್ರತಿಯನ್ನು ಸಲ್ಲಿಸತಕ್ಕದ್ದು.
3. ಪಾನ್ ಕಾರ್ಡ್ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
4. ಅಂತಿಮಗೊಂಡ ಬಿಡ್ಡುದಾರರು ಎರಡು ವರ್ಷದ ಅವಧಿಗೆ ಶೇಕಡ 5% ರಷ್ಟು ಭದ್ರತಾ ಠೇವಣಿಯನ್ನು **ಹಣಕಾಸು ಅಧಿಕಾರಿಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು** ಇವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು.
5. 3 ವರ್ಷದ ಕೆಲಸದ ಅನುಭವದ ಪತ್ರವನ್ನು ಲಗತ್ತಿಸುವುದು.

**ನಿಯಮ ಮತ್ತು ಷರತ್ತುಗಳು**

1. ಬೈಂಡಿಂಗ್‌ಗೆ ಬಳಸುವ 2Mg ದಾರ ಉತ್ತಮ ಗುಣಮಟ್ಟದಿಂದ ಕೂಡಿರಬೇಕು.
2. ಬೈಂಡಿಂಗ್‌ಗೆ ಬಳಸುವ ಗಮ್ (Special quality fevikwik gum) ಉತ್ತಮ ಗುಣಮಟ್ಟದಿಂದ ಕೂಡಿರಬೇಕು.
3. ಪ್ರತಿ ಪುಸ್ತಕಕ್ಕೆ ಆಯಾಯಾ ಅಳತೆಯ ಬಿಳಿಹಾಳೆಗಳನ್ನು ಪ್ರಥಮ ಪುಟ ಹಾಗೂ ಕೊನೆಯ ಪುಟದಲ್ಲಿ ಎರಡರಂತೆ ಅಳವಡಿಸಬೇಕು.
4. 2 ಮತ್ತು 3 ಪೌಂಡ್‌ನ ಸ್ಟಿಪ್ ಬೋರ್ಡ್ (Stip Board) ಸುಪಿರಿಯರ್ ಕ್ಯಾಲಿಕೊ ಕವರಿಂಗ್ ರಟ್ಟು ಉತ್ತಮವಾಗಿರಬೇಕು.
5. ಹೆಚ್ಚು ಅವಧಿಯವರೆಗೆ ಬಳಕೆಯಾಗುವಂತೆ ಬೈಂಡಿಂಗ್ ಕಾರ್ಯ ನಿರ್ವಹಿಸಬೇಕು.
6. ಆಯ್ಕೆಯಾದ ಸಂಸ್ಥೆಯು ಕರಾಮುವಿ ನಿಗದಿಪಡಿಸಿದ ಸ್ಥಳದಲ್ಲಿ ಗೌಪ್ಯತೆಯನ್ನು ಕಾಪಾಡಿಕೊಂಡು ಬೈಂಡಿಂಗ್ ಕಾರ್ಯ ನಿರ್ವಹಿಸಬೇಕು ಈ ಸಂಬಂಧ ಒಪ್ಪಿಗೆ ಪತ್ರ ನೀಡಬೇಕು.
7. ದರಪಟ್ಟಿಯನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಹೊಂದಿರುತ್ತದೆ..
8. ದರಪಟ್ಟಿ ಕರೆದು ನಿಗದಿಪಡಿಸಿದ ದರವು ಕಾರ್ಯದೇಶ ಹೊರಡಿಸಿದ ದಿನಾಂಕದಿಂದ **ಎರಡು ವರ್ಷದ** ಅವಧಿಗೆ ಚಾಲ್ತಿಯಲ್ಲಿರುತ್ತದೆ.

ದರಪಟ್ಟಿಯನ್ನು ಮೊಹರಾದ ಲಕೋಟೆಯಲ್ಲಿಟ್ಟು **"ಬೈಂಡಿಂಗ್ ಕಾರ್ಯದ ಸಂಬಂಧದ ದರಪಟ್ಟಿ"** ಎಂಬುದಾಗಿ ಶೀರ್ಷಿಕೆಯನ್ನು ಬರೆದು ದಿನಾಂಕ: 16/01/26 ಸಂಜೆ 5.00 ಘಂಟೆಯೊಳಗೆ **"ಕುಲಸಚಿವರು (ಮೌಲ್ಯಮಾಪನ) ಪರೀಕ್ಷಾ ಭವನ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು-570006"** ಇವರ ಹೆಸರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವುದು ಅಂಚೆ ವಿಳಂಬಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗಿರುವುದಿಲ್ಲ.

**ಆದೇಶದ ಮೇರೆಗೆ**

**ಕುಲಸಚಿವರು(ಪರೀಕ್ಷಾಂಗ)**

ಪ್ರತಿಗಳು

1. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಶಾಖೆ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು.
4. ಡಾ. ನವೀನ್ ಕುಮಾರ್ ಸಿ.ಜೆ. ನೋಡೆಲ್ ಅಧಿಕಾರಿ, ವೆಬ್ ಸೈಟ್ ಕರಾಮುವಿ ಮುಕ್ತಗಂಗೋತ್ರಿ ಮೈಸೂರು.

   ಸದರಿ ಪ್ರಕಟಣೆಯನ್ನು ವಿ.ವಿ. ನಿಲಯದ ವೆಬ್ ಸೈಟ್ನಲ್ಲಿ ಪ್ರಕಟಿಸುವುದು.
5. ಕಚೇರಿ ಪ್ರತಿ.